**ವ್ಯಾಖ್ಯಾನ**

# <u>ಸ್ತ್ರೀಯರಿಗೆ ಪುರುಷರು ಮೋಹಿಸುವರಲ್ಲದೆ</u>

ಉಗಾಭೋಗದ ಚಿಂತನೆ:

**ಸ್ತ್ರೀಯರಿಗೆ ಪುರುಷರು ಮೋಹಿಸುವರಲ್ಲದಲೆ**

**ಪುರುಷರಿಗೆ ಪುರುಷರು ಮೋಹಿಸುವರುಂಟೆ?**

**ಹರಿ ಪರಮ ಪುರುಷ ಪುರುಷೋತ್ತಮ**

**ಪುರುಷ ಬ್ರಹ್ಮಾದಿಗಳು ನಿನಗೆ ಮೋಹಿಸುವರು**

**ತಿರುವೇಂಗಳಪ್ಪ ಸಿರಿ ಪುರಂದರ ವಿಠಲ**

**ಧರೆಯೊಳು ನೀನು ಮೋಹನ ರೂಪ ಕಾಣೋ**

ಭಗವದ್ಗೀತೆಯ ಈ ಶ್ಲೋಕಗಗಳ ಭಾವಾರ್ಥದಂತಿದೆ ಈ ಉಗಾಭೋಗ.

**"ದ್ವಾವಿಮೌ ಪುರುಷೌ ಲೋಕೇ ಕ್ಷರಾಶ್ಚಕ್ಷರ ಏವ ಚ/**

**ಕ್ಷರ: ಸರ್ವಾಣಿ ಭೂತಾನಿ ಕೂಟಸ್ಥೋ$ಕ್ಷರ ಉಚ್ಚತೇ//**

**ಉತ್ತಮ:ಪುರುಷಸ್ತನ್ಯ: ಪರಮಾತ್ಮೇತ್ಯುದಾಹೃತ:/**

**ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರ://**

ಲೋಕದಲ್ಲಿ ಎರಡು ರೀತಿಯ ಪುರುಷರಿದ್ದಾರೆ.

**೧) ಕ್ಷರ --** ದೇಹ ನಾಶವುಳ್ಳ ಬ್ರಹ್ಮದೇವರಿಂದ ಹಿಡಿದು ತೃಣ ಪರಿಯಂತ ಸಕಲ ಜೀವರು.

**೨) ಅಕ್ಷರ ಪುರುಷ --** ದೇಹ ನಾಶವಿಲ್ಲದ ಲಕ್ಷ್ಮೀ ನಾರಾಯಣರು.

ಕ್ಷರ ಮತ್ತು ಅಕ್ಷರ ಪುರುಷರಲ್ಲಿ ಉತ್ತಮನಾದವನೇ ಪರಮ ಪುರುಷೋತ್ತಮ ಶ್ರೀ ಹರಿ.
ಅವನೇ ಈ ಸಕಲ ಜಗತ್ತನ್ನು ಆವರಿಸಿ ನಿಂತು ರಕ್ಷಣೆ ಮಾಡುತ್ತಿದ್ದಾನೆ.

ಪುರುಷರಾದ ಬ್ರಹ್ಮಾದಿಗಳು ಭಗವಂತನಿಂದ ಆಕರ್ಷಿಸಲ್ಪಡುವರು. ಅವನನ್ನು ಮೋಹಿಸುವರು ಅಂದರೆ ಬಯಸುವರು.
ಏಕೆಂದರೆ ಅವನೇ ಅವರಿಗೆ ಇಷ್ಟ.
ಲೋಕದಲ್ಲಿ ದೇವರನ್ನು ಇಷ್ಟ ಮತ್ತು ಇಷ್ಟ ಸಾಧನ ಎಂದು ಎರಡು ರೀತಿಯಿಂದ ಜೀವರು ಉಪಾಸಿಸುತ್ತಾರೆ.
ಏಕಾಂತ ಭಕ್ತರಾದ ಬ್ರಹ್ಮಾದಿಗಳಿಗೆ ಭಗವಂತ ಇಷ್ಟ.
ಆದರೆ ಉಳಿದ ಸಾಧಕರು ಅಂದರೆ ಅವನಿಂದ ಸುಖ (ಮೋಕ್ಷ) ಬಯಸುವವರಿಗೆ ಅವನು ಇಷ್ಟ ಸಾಧನ.

ಅದನ್ನೇ ಇಲ್ಲಿ ದಾಸರು ಬ್ರಹ್ಮಾದಿಗಳು ನಿನಗೆ ಮೋಹಿಸುವರು ಅಂದರೆ ನಿನ್ನನ್ನೇ ಬಯಸುವರೇ ವಿನಃ ನೀನು ಕೊಡುವ ಮೋಕ್ಷವನ್ನಲ್ಲ - ಎನ್ನುತ್ತಾರೆ.

ಶ್ರೀ ಜಗನ್ನಾಥದಾಸರ ಈ ಸಾಲು –

**"ಶಿಷ್ಟೇಷ್ಟನೆಂದನವರತ ಸದ್ಭಕ್ತಿ ಪಾಶದಲಿ ಕಟ್ಟುವರ ಭವ ಕಟ್ಟು ಬಿಡಿಸುವ ….. "**

ಶ್ರೀ ಹರಿಯನ್ನು ಸಜ್ಜನರ ಇಷ್ಟ ಎಂದರಿಯಬೇಕು. ಹಾಗೆ ಅರಿತು ಭಕ್ತಿ ಮಾಡುವವರ ಭವ-ಕಟ್ಟು ಬಿಡಿಸುವನು ಎಂದರ್ಥ

ಲೋಕದಲ್ಲಿ ಸ್ತ್ರೀ ಪುರುಷರ ನಡುವೆ ಆಕರ್ಷಣೆ ಸಹಜವಾದದ್ದು.
ಆದರೆ ದೇವರನ್ನೇ ಅಪೇಕ್ಷಿಸುವವರು ಶಿಷ್ಟರು (ಸಜ್ಜನರು)

ಹದಿನಾರು ಸಾವಿರದ ನೂರು ಜನ ಅಗ್ನಿ ಪುತ್ರರು ದೇವರನ್ನು ಬಯಸಿ ತಪಸ್ಸುಮಾಡಿ ವಾಯು ದೇವರನ್ನು ಒಲಿಸಿಕೊಂಡು ವರ ಪಡೆದು ದ್ವಾಪರದಲ್ಲಿ ಸ್ತ್ರೀಯರಾಗಿ ಕೃಷ್ಣಪತ್ನಿಯರಾದರು.

**ಪುರಂದರ ವಿಠಲ**

- ವಿ – ಜ್ಞಾನ (ಮೋಕ್ಷಕ್ಕೆ ಮಾರ್ಗವಾದ ಜ್ಞಾನ)
- ಠ -- ಶೂನ್ಯರು
- ಲ -- ಲಾತಿ ಸ್ವೀಕರೋತಿ.
- ಪುರ -- ಲಿಂಗ ದೇಹ

- ದರ -- ಸೀಳು.

ಅಜ್ಞಾನಿಗಳಿಗೆ ಜ್ಞಾನ ಕೊಟ್ಟು ,ಅವರ ಲಿಂಗದೇಹ ಕಳೆದು ಮೊಕ್ಷ ಪ್ರದನಾದ ದೊರೆಯನ್ನು ಯಾರು ತಾನೆ ಬೇಡ ಎನ್ನುವರು ?

ಬಲ್ಲೆನೆಂಬುರಿಲ್ಲ ಈತನ
ಒಲ್ಲೆನೆಂಬುವರಿಲ್ಲ ಲೋಕದೊಳಿಲ್ಲದ ಸ್ಥಳವಿಲ್ಲವಜ್ಞಾತ ಜನರಿಲ್ಲ//(ಹರಿಕಥಾಮೃತಸಾರ)

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ